
# ರಕ್ತ ಕ್ಯಾನ್ಸರ್.. ಭಯ ಬೇಡ



ರಕ್ತದ ಕ್ಯಾನ್ಸರ್ ಹೇಗೆ ಬರುತ್ತದೆ, ಬರಲು ಕಾರಣಗಳೇನು? ಅನುವಂಶೀಯವಾಗಿ ಬರುತ್ತದೆಯೇ? ಈ ಕಾಯಿಲೆ ಯಾರ ಮೇಲಾದರೂ ಹೇಳದೆ ಕೇಳದೆ ಬಂದೆರಗಬಹುದೇ? ಬರದಂತೆ ಏನೇನು ಮುನ್ನೆಚ್ಚರಿಕೆಗಳನ್ನು ಅನುಸರಿಸಬೇಕು ಎಂಬುದರ ಬಗ್ಗೆ ಜನರಿಗೆ ಅರಿವು ಇರಲೇ ಬೇಕು.

■ ಡಾ.ವಿ. ಭಾಸ್ಕರ್

ಕ್ಯಾನ್ಸರ್ ಎಂದ ಕೂಡಲೇ ಹೌಹಾರುವವರೇ ಹೆಚ್ಚು. ಪ್ರಾಣಕ್ಕೆ ಸಂಚಕಾರ ತರುವ ಕ್ಯಾನ್ಸರ್‌ನಲ್ಲೂ ನೂರಾರು ವಿಧ. ಇದರಲ್ಲೂ ರಕ್ತದ ಕ್ಯಾನ್ಸರ್ ಎಂಬುದು ರಕ್ಕಸನೇ. ಇದಕ್ಕೆ ತುತ್ತಾದವರು ದೈಹಿಕ ಮಾನಸಿಕ ಎರಡೂ ರೀತಿಯ ಸಂಕಟ ಅನುಭವಿಸುತ್ತಾರೆ.

ಅಂದ ಹಾಗೆ ನನಗೆ ರಕ್ತದ ಕ್ಯಾನ್ಸರ್ ಬಂದು 10 ತಿಂಗಳಾಯಿತು. ಆದರೂ ನಾನು ಸಾವಿನ ಅಂಚಿನಿಂದ ಸರಿದು ಬದುಕುಳಿದಿದ್ದೇನೆ. ಸಾವಿರಾರು ಜನರು ರಕ್ತದ ಕ್ಯಾನ್ಸರ್ ಸೇರಿ ಇತರೇ ಅನೇಕ ಕ್ಯಾನ್ಸರ್ ಬೇನೆಗಳಿಂದ ಜೀವನ್ಮರಣದ ನಡುವೆ ಹೋರಾಡುತ್ತಿದ್ದಾರೆ. ಕ್ಯಾನ್ಸರ್ ಆಸ್ಪತ್ರೆಗಳಿಗೆ ಬರುವ ರೋಗಿಗಳ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಲೇ ಇದೆ. ಇದು ಆರ್ಥಿಕವಾಗಿ ಹಿಂಡಿ ಹಾಕುವ ಕಾಯಿಲೆ. ಎಷ್ಟೆಲ್ಲಾ ಖರ್ಚು ಮಾಡಿದರೂ ಬದುಕುಳಿಯುವುದು ಕಷ್ಟ. ಇಂತಹ ಕಾಯಿಲೆಯ ಬಗ್ಗೆ ಅನೇಕ ಜನರಲ್ಲಿ ಮಾಹಿತಿ ಇಲ್ಲ. ರಕ್ತದ ಕ್ಯಾನ್ಸರ್ ಹೇಗೆ ಬರುತ್ತದೆ, ಬರಲು ಕಾರಣಗಳೇನು? ಅನುವಂಶೀಯವಾಗಿ ಬರುತ್ತದೆಯೇ? ಈ ಕಾಯಿಲೆ ಯಾರ ಮೇಲಾದರೂ ಹೇಳದೆ ಕೇಳದೆ ಬಂದೆರಗಬಹುದೇ? ಬರದಂತೆ ಏನೇನು ಮುನ್ನೆಚ್ಚರಿಕೆಗಳನ್ನು ಅನುಸರಿಸಬೇಕು ಎಂಬುದರ ಬಗ್ಗೆ ಅರಿವು ಮೂಡಿಸಲೇ ಬೇಕು.

**ಅನಿರೀಕ್ಷಿತ ಆಘಾತ**

ಕಳೆದ ವರ್ಷ ನನ್ನಾಕೆ ಅಮೆರಿಕ ಪ್ರವಾಸ ಮುಗಿಸಿ ಬೆಂಗಳೂರಿಗೆ ಬಂದಿಳಿಯಲು ಇನ್ನೆರಡು ದಿವಸ ಬಾಕಿ ಇತ್ತು. ರಾತ್ರಿ ಊಟಕ್ಕೆ ಎಂದಿನಂತೆ ಪಲ್ಯ ಬಿಸಿ ಮಾಡಿಕೊಂಡು ಬಿಸಿ ಅನ್ನ ಮಾಡಿಕೊಂಡು ಊಟ ಮುಗಿಸಿದ್ದೆ. ಊಟದ ನಂತರ ಎಷ್ಟೋ ದಿವಸಗಳ ಹಳೆಯದಾದ ಪಾನೀಯವನ್ನು ಎರಡು ಗುಟುಕು ಕುಡಿದಿದ್ದೆ. ತಕ್ಷಣ ಗಂಟಲು ಕಟ್ಟಿಕೊಂಡ ಹಾಗಾಯಿತು. ಕಿರು ನಾಲಿಗೆ ಊತ ಬಂದಂತೆ, ಎಂಜಲು ನುಂಗಲೂ ಕಷ್ಟವೆಂಬಂತೆ ಆಗಿ ರಾತ್ರಿ ಲಘು ಜ್ವರವೂ ಬಂತು. ಆಹಾರ ದೋಷವಾಗಿ ಗಂಟಲು ನಂಜಾಗಿರಬಹುದೇನೋ.. ಹೋಗುತ್ತದೆ ಎಂದುಕೊಂಡಿದ್ದೆ. ಮುಂದಿನ ದಿನ ಮಧ್ಯರಾತ್ರಿಯಾದರೂ ಜ್ವರ ಕಡಿಮೆಯಾಗಲಿಲ್ಲ. ಮರು ದಿನ ಬೆಳಿಗ್ಗೆಯೇ ನಮ್ಮ ಕುಟುಂಬದ ಹೋಮಿಯೋಪತಿ ವೈದ್ಯರನ್ನು ಕಂಡು ಔಷಧಿ ತೆಗೆದುಕೊಂಡೆ. ಗಂಟಲು ನೋವೇನೋ ಕಡಿಮೆಯಾಯಿತು. ಆದರೆ ಜ್ವರ ಬೆಳಿಗ್ಗೆ 99 ಡಿಗ್ರಿ ಇದ್ದರೆ ರಾತ್ರಿಯ ವೇಳೆಗೆ ಕ್ರಮೇಣ 100, 101, 102 ರತ್ತ ತಲುಪುತ್ತಿತ್ತು. ಜ್ವರ ಒಂದು ತಿಂಗಳವರೆಗೂ ನಿಲ್ಲಲಿಲ್ಲ. ಬಾಯಲ್ಲಿ ಅರುಚಿ, ಹಸಿವಿಲ್ಲ, ಆಹಾರ ಸೇವನೆಯೇ ಕಷ್ಟವಾಗುತ್ತಿತ್ತು. ಪರಿಣಾಮವಾಗಿ ದೇಹದ ತೂಕವೂ ಬಹಳ ಕಡಿಮೆಯಾಯಿತು.

ಒಂದೂವರೆ ತಿಂಗಳಿನಲ್ಲಿ ನೂರೆಂಟು ಪರೀಕ್ಷೆಗಳನ್ನು ಮಾಡಿಸಿದ್ದಾಯಿತು. ಅನೇಕ ಸುತ್ತು ಆ್ಯಂಟಿಬಯೋಟಿಕ್‌ಗಳನ್ನು ನುಂಗಿದ್ದೂ ಆಯಿತು. ಯಾವುದು ಪ್ರಯೋಜನವಾಗಲಿಲ್ಲ. ರಕ್ತದ ಪರೀಕ್ಷಾ ವರದಿಯನ್ನು ನೋಡಿ ವೈದ್ಯರು ಇದು ರಕ್ತಕ್ಕೆ ಸಂಬಂಧಪಟ್ಟ ಕಾಯಿಲೆ ಇರಬಹುದೆಂದು ಅನುಮಾನಿಸಿದರು. ರಕ್ತದ ಕ್ಯಾನ್ಸರ್ ಅನ್ನು ಅಲ್ಲಗಳೆಯುವುದಕ್ಕೆ ಮೂಳೆ ತಿರುಳು ಪರೀಕ್ಷೆ ಮಾಡಿಸಿ ಎಂದಿದ್ದರು. ನನಗೆ ನಂಬಿಕೆ ಬರಲಿಲ್ಲ. ಸ್ವಚ್ಛವಾದ ಜೀವನ ಶೈಲಿ, ಮನೆಯ ಊಟ ಮಾಡಿಕೊಂಡಿರುವವನಿಗೆ, ಧೂಮಪಾನ, ಮದ್ಯಪಾನದ ಅಭ್ಯಾಸವಿಲ್ಲ, ಪಶ್ಚಿಮ ಘಟ್ಟದ ಎತ್ತರದ ಅನೇಕ ಬೆಟ್ಟಗಳನ್ನು ಚಾರಣ ಮಾಡುತ್ತಿದ್ದವನಿಗೆ ರಕ್ತದ ಕ್ಯಾನ್ಸರ್ ಬಂದಿರಬಹುದೆಂದು ನಂಬಲು ಸಾಧ್ಯವಾಗಲಿಲ್ಲ. ನನ್ನ ವಂಶದಲ್ಲಿ ಯಾರಿಗಾದರೂ ಈ ಸಮಸ್ಯೆ ಬಂದಿತ್ತಾ ಎಂದು ಪರಿಶೀಲಿಸಿದಾಗ ಅದೂ ಕಂಡುಬರಲಿಲ್ಲ. ವೈದ್ಯರು ಹೇಳಿದ್ದನ್ನು ಅಲ್ಲಗಳೆದು ನನಗೆ ಬೇರೆ ಏನೋ ಕಾರಣವಿರಬಹುದೆಂದು ಬೇರೆ ಪರೀಕ್ಷೆಗಳನ್ನು ಮಾಡಿಸಿದೆ. ಆದರೆ ಎಲ್ಲವೂ ಸರಿಯಿದೆ ಎಂದೇ ಬಂತು.

ಕಡೆಗೆ ರಕ್ತಕ್ಕೆ ಸಂಬಂಧಪಟ್ಟ ತಜ್ಞವೈದ್ಯರನ್ನು ಸಂಪರ್ಕಿಸಿದಾಗ 'ನಿಮಗೊಂದು ಕೆಟ್ಟ ಸುದ್ದಿ ಇದೆ, ನಿಮಗೆ ರಕ್ತದ ಕ್ಯಾನ್ಸರ್ ಆಗಿದೆ' ಎಂದು ಹೇಳಿಬಿಟ್ಟರು. ಕೇಳಿ ತಕ್ಷಣ ದಂಗಾದೆ. ವೈದ್ಯರು ಹೇಳಿದರು, 'ಇದರ ಚಿಕಿತ್ಸೆ ಬಹಳ ದುಬಾರಿ. ತಕ್ಷಣವೇ ಇದನ್ನು ಚಿಕಿತ್ಸೆ ನೀಡುವ ನೈಪುಣ್ಯ ಹೊಂದಿರುವ ಸೂಕ್ತ ತಜ್ಞ ವೈದ್ಯರನ್ನು ಕಂಡು ಚಿಕಿತ್ಸೆ ಆರಂಭಿಸುವುದು ಒಳ್ಳೆಯದು. ನನಗೆ